ಅಸಲು ದಾವೆ ನಂಬರ:9/2021

ವಾದಿ ಸಾಕ್ಷಿ-1

ದಿನಾಂಕ 23-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

**ಮುಖ್ಯವಿಚಾರಣೆ : ವಾದಿಯರ ಪರ ವಕೀಲರಿಂದ.**

ಈ ದಾವೆಯಲ್ಲಿ ನಾನು 1 ನೇ ವಾದಿಯಾಗಿದ್ದು ಇಂದು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರ ವನ್ನು ಸಲ್ಲಿಸಿರುತ್ತೇನೆ., ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತವೆ ಅಂತಾ ಒಪ್ಪಿ ನಾನು ಸಹಿ ಮಾಡಿರುತ್ತೇನೆ.

ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

1) 2019-20 ನೇ ಸಾಲಿನ ಪುರಸಭೆ ದೇವದುರ್ಗ ಇವರು ನೀಡಿದ ಮನೆ ನಂ.87 ರ ದಾಖಲೆಯ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು.
2) 2019-20 ನೇ ಸಾಲಿನ ಪುರಸಭೆ ದೇವದುರ್ಗ ಇವರು ನೀಡಿದ ಮನೆ ನಂ.84 ರ ದಾಖಲೆಯ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು.
3) 2019-20 ನೇ ಸಾಲಿನ ಪುರಸಭೆ ದೇವದುರ್ಗ ಇವರು ನೀಡಿದ ಮನೆ ನಂ.88/1 ರ ದಾಖಲೆಯ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು.
4) ಆಸ್ತಿಯ ಇ-ಖಾತಾ ದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.
5) ದಿನಾಂಕ 17-06-2020 ರಂದು ನೋಂದಣಿಯಾದ ದಾನ ಪತ್ರದ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತಾರೆ.
6) ವರ್ಗಾವಣೆ ಆದೇಶದ ನೆರಳಚ್ಚು ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಈ ಹಂತದಲ್ಲಿ ವಾದಿಯರ ಪರ ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.

ಪ್ರ.ದ.ನ್ಯಾದಂ.ಗಳು, ದೇವದುರ್ಗ.